ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿಕೆ

ವಿಷಯ: ಸಹಕಾರಿ ಇಲಾಖೆಯ ಬಗ್ಗೆ ಸಹಕಾರಿ ಸಚಿವರು ಹೇಳಿಕೆ ನೀಡಿರುವ ಬಗ್ಗೆ

ಶ್ರೀ ವೆಂಕಟರಾವ್ ನಾಡಗೌಡ: ಮಾನ್ಯ ಅಧ್ಯಕ್ಷರೆ, ನಿಯಮ 60ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅದಕ್ಕೆ ತಾವು ಅವಕಾಶ ಮಾಡಿಕೂಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಹಕಾರ ಸಚಿವರು ಹೇಳಿಕೆ ಕೊಟ್ಟಿರುವುದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಮನವಿಯನ್ನು ಕೊಟ್ಟಿದ್ದೇವೆ. ದಿನಾಂಕ 17ರಂದು ಸನ್ಮಾನ್ಯ ಸಹಕಾರಿ ಸಚಿವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಯನ್ನು ನೋಡಿದಾಗ, ಒಬ್ಬ ಸಹಕಾರಿಯಾಗಿ ನನಗೆ ಬಹಳ ಕಷ್ಟ ಎನಿಸುತ್ತದೆ. ಏಕೆಂದರೆ, ಸದನ ನಡೆಯುವ ಸಂದರ್ಭದಲ್ಲಿ ಸಹಕಾರ ಸಚಿವರೇ ಈ ತರಹ ಹೇಳಿಕೆ ಕೊಟ್ಟರೆ, ಸಹಕಾರ ಇಲಾಖೆ ದಾರಿ ತಪ್ಪಿದೆ, ಹಿಂದಿನವರು ಯಾರು ಕೆಲಸ ಮಾಡಿಲ್ಲ ಎನ್ನುವಂಥ ಭಾವನೆ ಬರುತ್ತದೆ. ನಾವೂ ಸಹ ಸಹಕಾರಿಗಳಾಗಿ ಕೆಲಸ ಮಾಡಿದ್ದೇವೆ. ಉತ್ತಮ ಸಹಕಾರಿ ಸಂಸ್ಥೆಗಳು ಈ ರಾಜ್ಯದಲ್ಲಿ ಇವೆ. ಆದರೂ ಕೂಡ ಈ ತರಹದ ಹೇಳಿಕೆ ಕೊಟ್ಟಿರುವುದರಿಂದ ನಾನು ಒಬ್ಬ ಸಹಕಾರಿಯಾಗಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ನಿಯಮಯ 60ರ ಅಡಿಯಲ್ಲಿ ಅನುವು ಮಾಡಿಕೊಡಬೇಕೆಂದು ನಾವು ಕೇಳಿದ್ದೇವೆ. ಅದಕ್ಕೆ ಅನುವು ಮಾಡಿಕೊಡಬೇಕೆಂದು ನಾವು ತಮ್ಮಲ್ಲಿ ವಿನಂತಿ ಮಾಡುತ್ತೇವೆ. ದಯವಿಟ್ಟು, ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಜೆ. ಪುಟ್ಟಸ್ವಾಮಿ(ಸಹಕಾರಿ ಸಚಿವರು): ನಾನು ಈ ನಿಲುವಳಿ ಸೂಚನೆಯನ್ನು ನೋಡಿದ್ದೇನೆ. ನನ್ನ 40 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಇಂಥ ವಿಷಯಕ್ಕೆ ನಿಲುವಳಿ ಸೂಚನೆಯನ್ನು ಕೊಡತಕ್ಕಂಥದ್ದನ್ನು ನಾನು ಶಾಸಕನಾಗಿಯೂ ನೋಡಿಲ್ಲ ಅಥವಾ ಹೊರಗಡೆಯೂ ನೋಡಿಲ್ಲ. ಯಾವ ಸಂದರ್ಭದಲ್ಲಿ ಯಾವ ವಿಚಾರವನ್ನು ಹೇಳಿರುತ್ತೇನೆ ಎನ್ನತಕ್ಕಂಥದ್ದರ ಬಗ್ಗೆ ಪತ್ರಿಕೆಗಳಲ್ಲಿ ಬರುವ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಎಂದರೆ ಹೇಗೆ? ಯಾವುದೇ ಒಂದು ನಿರ್ದಿಷ್ಟ ವಿಚಾರದಲ್ಲಿ ಯಾರ ಮೇಲೆಯೂ

ನಾನೂ ಆಪಾದನೆ ಮಾಡಿಲ್ಲ. ಇದರ ಮೇಲೆ complaint ಇದೆ ಏನು ಮಾಡುತ್ತೀರೆಂದು ಯಾರೋ ಕೇಳಿರಬಹುದು. ನಾನು ಸ್ಪಷ್ಟವಾಗಿ, ಕಾನೂನಿನಡಿಯಲ್ಲಿ ಏನಾದರೂ ತಪ್ಪಿದ್ದರೆ, ಅಂಥವರ ಮೇಲೆ ಕ್ರಮ ತೆಗೆದುಕೊಳ್ಳತ್ತೇನೆಂದು ಹೇಳಿದ್ದೇನಷ್ಟೇ. ಅದನ್ನು ಬಿಟ್ಟು ಇದನ್ನು ನಿಲುವಳಿ ಸೂಚನೆಯಲ್ಲಿ ಹೇಳತಕ್ಕಂಥದ್ದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಈ ವಿಷಯ ನಿಯಮ 60ರ ಅಡಿಯಲ್ಲಿ ಹೇಗೆ ಬರುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ: ನಾನು ನಿಮ್ಮ ಗಮನಕ್ಕೆ ತರುತ್ತೇನೆ. ನಚಿತರ, ತಾವು ಏನು ಬೇಕಾದರೂ decision ತೆಗೆದುಕೊಳ್ಳಿ. ಸಭಾನಾಯಕರು ಇದ್ದಾರೆ, ವಿರೋಧ ಪಕ್ಷದ ನಾಯಕರು ಇದ್ದಾರೆ. ಅವರು ಹೇಳಿರುವುದೇನೆಂದರೆ, ಸಹಕಾರಿ ಸಂಘಗಳಲ್ಲಿ ಹಣ ದುರುಪಯೋಗ ಮಾಡಿರುವುದು ಸಮಾಜಕ್ಕೆ ಮಾಡುವ ದ್ರೋಹ.

(ಗೊಂದಲ)

ಅಧ್ಯಕ್ಷರು: ಯಾರಾದರೂ ಒಬ್ಬರೂ ಪ್ರಸ್ತಾಪ ಮಾಡಿದರೆ ಸಾಕು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ:ಒಂದು ನಿಮಿಷ ಸಾರ್, ನಾನೂ ಇದಕ್ಕೆ signature ಹಾಕಿದ್ದೇನೆ. ಸಹಕಾರಿ ಸಂಘದಿಂದ 1 ಲಕ್ಷ ಜನರಿಗೆ ಸಿಗಬೇಕಾದ ಸವಲತ್ತುಗಳು ಒಬ್ಬ ವ್ಯಕ್ತಿಗೆ ಸಿಕ್ಕಿದೆ ಎಂದು ಅವರು ಹೇಳಿದ್ದಾರೆ. ಆ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ ಎಂದು ಹೇಳುತ್ತಾರೆ. ಅದರ ಜೊತೆಗೆ, ಸಹಕಾರ ಇಲಾಖೆ, ಕಂಪಿಪ್ಲೀಟ್ ಗೃಹ ನಿರ್ಮಾಣ ಮಂಡಳಿಯಲ್ಲಿ ಅವ್ಯವಹಾರ ನಡೆದಿದೆ. Totally ಸಹಕಾರ ಇಲಾಖೆಯಲ್ಲಿ ಹಿಂದಿನ ಮಂತ್ರಿಗಳೆಲ್ಲ failure ಆಗಿದ್ದಾರೆನ್ನುವುದನ್ನು ಮಾನ್ಯ ಮಂತ್ರಿಗಳು ಬಹಿರಂಗವಾಗಿ, ಸಾರ್ವಜನಿಕವಾಗಿ ಪತ್ರಿಕೆಗಳಲ್ಲಿ ಹೇಳಿದ್ದಾರೆ.

(ಗೊಂದಲ)

ಶ್ರೀ. ಹೆಚ್.ಡಿ.ರೇವಣ್ಣ: ಇದು ನಾನು ಹೇಳಿದ್ದಲ್ಲ, print media ಎಲ್ಲದರಲ್ಲಿ ಹೇಳಿದ್ದಾರೆ. ಚರ್ಚೆ ಮಾಡಿ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ(ಕೃಷಿ ಸಚಿವರು): ಹಿಂದಿನ ಮಂತ್ರಿಗಳು, ಮುಂದಿನ ಮಂತ್ರಿಗಳು ಇವೆಲ್ಲ ಏಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಸಹಕಾರ ಇಲಾಖೆಯೇ ಸತ್ತು ಹೋಗಿದೆ ಎಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಹೇಗೆ ಬರುತ್ತದೆ? ನೀವು merits ಮೇಲೆ ಚರ್ಚೆ ಮಾಡಿಕೊಂಡು ಕುಳಿತರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ರಾಜ್ಯದಲ್ಲಿ ಬೆಂಕಿ ಬಿದ್ದಿದೆ ಎಂದಿರುವುದಕ್ಕೆ ನೀವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ನಿಯಮ 60ರ ಅಡಿಯಲ್ಲಿ ಮಾನ್ಯ ರೇವಣ್ಣನವರು ಸಹಕಾರ ಸಂಘಗಳಿಗೆ ಸಂಬಂಧಪಟ್ಟಹಾಗೆ ತಂದಿದ್ದಾರೆ. ಆದರೆ, ಇದು ಯಾವುದೇ ಘಟನೆಗೆ ಸಂಬಂಧಪಟ್ಟಿದ್ದು ಅಲ್ಲದೇ ಇರುವುದರಿಂದ ಮತ್ತು ಕೋರಿಕೆಯ ಮೇರೆಗೆ ನಿಯಮ 69ರ ಅಡಿಯಲ್ಲಿ ಇದರ ಚರ್ಚೆಗೆ ಅಚಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಸಾರ್, ತಾವು ಪ್ರಾರಂಭ ಮಾಡಿ.

(ಗೊಂದಲ)

ಅಧ್ಯಕ್ಷರು: ಆಯಿತು. ಇದೆಲ್ಲ ನಿಯಮ 60ರ ಅಡಿಯಲ್ಲಿ ಚರ್ಚೆಗೆ ತರುವಂಥ ವಿಷಯವೇ ಅಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ರೇವಣ್ಣನವರೆ, ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಚರ್ಚೆ ಮಾಡಹುದು.

ಅಧ್ಯಕ್ಷರು: ಆಯಿತು ಕೊಟ್ಟಿದ್ದೇನೆ, ಚರ್ಚೆ ಮಾಡಿ

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಏನು ಹೇಳಿ

ಅಧ್ಯಕ್ಷರು: ಆಯಿತು, ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.ಈ ವಿಷಯ ಯಾವ ನಿಯಮದಡಿಯಲ್ಲೂ ಚರ್ಚೆಗೆ ತರುವಂಥದ್ದಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಆಯಿತು, ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ವಿಷಯ ನಿಯಮ 60ರ ಅಡಿಯಲ್ಲಿ ತರುವ ವಿಷಯವಲ್ಲ, ನಿಯಮ 69ಕ್ಕೆ convert ಮಾಡುವ ವಿಷಯವೂ ಅಲ್ಲ. ಮಾಡಿ ಬಿಟ್ಟಿದ್ದೀರಿ. I am not questioning your order.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ:ಪತ್ರಿಕೆಗಳಲ್ಲಿ ಬಂದ ವಿಷಯದ ಬಗ್ಗೆ ಸದನದಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಾದರೆ ಅವರು writing ನಲ್ಲಿ ಏನು ಕೊಡುತ್ತಾರೋ ಕೊಡಲಿ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಈಗಾಗಲೇ ಮಾನ್ಯ ಅಧ್ಯಕ್ಷರು Ruling ಕೊಟ್ಟಿದ್ದಾರೆ, ನೀವು ಅದನ್ನು ಪ್ರಶ್ನೆ ಮಾಡುವ ಹಾಗಿಲ್ಲ. ನೀವೇ ಪ್ರಶ್ನೆ ಮಾಡಿಕೊಂಡು ಕುಳಿತರೆ ಹೇಗೆ?

ಶ್ರೀ ಬಿ.ಜೆ.ಪುಟ್ಟಸ್ವಾಮಿ: ಖಂಡಿತ ಒಪ್ಪುತ್ತೇನೆ.

3. ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ: ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :. ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಬರದ ಬಗ್ಗೆ ಚರ್ಚೆ ಮಾಡುವಾಗ ಕರ್ನಾಟಕದಲ್ಲಿ ಬರ ಎಷ್ಟು ಭೀಕರವಾಗಿದೆ, ಕಳೆದ ವರ್ಷ ಮತ್ತು ಈ ವರ್ಷ ಮುಂಗಾರು ಹೇಗೆ ದುರ್ಬಲವಾಗಿದೆ ಎಂಬ ಚಿತ್ರವನ್ನು ಸದನದ ಮುಂದೆ ಇಟ್ಟಿದ್ದೆ. ಬಹುಶಃ ಅವೆಲ್ಲವೂ ಕೂಡ ಸರ್ಕಾರದ ಗಮನದಲ್ಲಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನನ್ನೆ ನಾನು ಏನೇನು ಹೇಳಿದ್ದೆ ಅವೆಲ್ಲವೂ ಕೂಡ based on facts, based on information furnished by the Government and my information is also there. ಮಳೆ ಕೈಕೊಟ್ಟ ಮೇಲೆ ನಾನೂ ಅನೇಕ ಜಿಲ್ಲೆಗಳಿಗೆ ಅಂದರೆ ಚಿತ್ರದುರ್ಗ, ತುಮಕೂರು, ಚಾಮರಾಜನಗರ, ಮೈಸೂರು, ಮಂಡ್ಯ, ಚಿಕ್ಕನಾಯಕನಹಳ್ಳಿಗೆ ಭೇಟಿ ನೀಡಿದ್ದೆ. ತುಮಕೂರು ಮತ್ತು ಚಿತ್ರದುರ್ಗದಲ್ಲಂತೂ ಬಿತ್ತನೆ ಆಗಿಯೇ ಇಲ್ಲ. ತುಮಕೂರಿನ ಚಿಕ್ಕನಾಯಕನಹಳ್ಳಿ, 3–4 ತಾಲ್ಲೂಕುಗಳಲ್ಲಿ pre-monsoon ಬಿತ್ತನೆ ಮಾಡಿದ್ದರು, ಆದರೆ ಆ ಬೆಳೆ ಪೂರ್ತಿ ಒಣಗಿ ಹೋಯಿತು. ನಮ್ಮ ಮೈಸೂರಿನಲ್ಲಿ ಬಿತ್ತನೆ ಮಾಡಿದ್ದರು, ಹಾಸನದಲ್ಲಿ, ತುಮಕೂರಿನಲ್ಲಿ ಬಿತ್ತನೆ